ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಮೂಡಬಿದಿರೆ

ಸಿಸಿ ನಂ.1755/2021,

ಚಾಸಾ- 11, ಪ್ರಾಸಾ -3

| | |
|---|---|
| ಹೆಸರು | ರಮೇಶ್ ಅಂಗಡಿ ಕೇರಿ |
| ತಂದೆಯ ಹೆಸರು | ಚನ್ನ ಬಸಪ್ಪ |
| ವಯಸ್ಸು | 42 ವರ್ಷ |
| ಕೆಲಸ | ಲೈನ್ ಮೆನ್ |
| ವಾಸ | ಮೂಡಬಿದ್ರೆ , ಮೆಸ್ಕಾಂ ಕ್ವಾರ್ಟರ್ಸ್ |
| ಪ್ರಮಾಣೀಕರಿಸಿದ ದಿನಾಂಕ | 05-08-2025 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

1. ಚಾಸಾ-1 ರಿಂದ ಚಾಸಾ-3 ರವರು ಗೊತ್ತು ಅವರು ನನ್ನ ಸಹೋದ್ಯೋಗಿಗಳು . ಆರೋಪಿ ನನಗೆ ಈ ಪ್ರಕರಣದ ನಂತರ ಗೊತ್ತಿರುತ್ತಾರೆ . ದಿಃ 17-12-2020 ರಂದು ವಿದ್ಯುತ್ ಬಿಲ್ಲು ಬಾಕಿ ಮಾಡಿದ ಡಿಸ್ ಕನೆಕ್ಷನ್ ವಿಚಾರವಾಗಿ ಸಹಿ ಮಾಡಿರುತ್ತೇನೆ . ಸಾಕ್ಷಿ ನಿಪಿ-2 ರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಮೂಡಬಿದ್ರೆ ಪೊಲೀಸ್ ಠಾಣೆಯಲ್ಲಿ ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ . ಆ ಸಮಯದಲ್ಲಿ ಚಾಸಾ-12 ರವರೂ ಸಹ ಹಾಜರಿದ್ದರು . ಸದರಿ ಸಮಯ ಮೊಟಾರು ಸೈಕಲ್ , ಶರ್ಟ್ , ಬೈಕ್ , ಡಿಸ್ ಕನೆಕ್ಷನ್ ಬಗ್ಗೆ ಹರಿದ ಬಿಲ್ಲುಗಳನ್ನು ಸ್ವಾಧೀನ ಪಡಿಸಿಕೊಂಡಿರುತ್ತಾರೆ . ಮು.ಮಾ-1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ . ಸದರಿ ಮಹಜರನ್ನು 6-00 ರಿಂದ 6-30 ಗಂಟೆಯವರೆಗೆ ಮಹಜರನ್ನು ಮಾಡಿರುತ್ತಾರೆ .

ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಎಸ್.ಡಿ , ರವರಿಂದಃ

ಚಾಸಾ-1 ಮತ್ತು ಚಾಸಾ-2 ರವರು ನನ್ನನ್ನು ಪೊಲೀಸ್ ಠಾಣೆಗೆ ಸಹಿ ಮಾಡಲು ಕರೆದಿರುತ್ತಾರೆ . ನಾನು ನೇರವಾಗಿ ಪೊಲೀಸ್ ಇನ್ಸ್ ಪೆಕ್ಟರ್ ರವರ ಕೊಠಡಿಯ ಒಳಗೆ ಹೋದೆ . ನಾನು ಹೋದಾಗ ಮು.ಮಾ-1 ಮತ್ತು 2 ಪೊಲೀಸ್ ಇನ್ಸ್ ಪೆಕ್ಟರ್ ರವರ ಟೇಬಲ್ ಮೇಲೆ ಇತ್ತು . ನಾನು ಹೋಗುವಷ್ಟರಲ್ಲಿ ಚಾಸಾ-1 ಮತ್ತು 2 ರವರು ನಿಪಿ-2 ಕ್ಕೆ ಸಹಿ ಮಾಡುತ್ತಿದ್ದರು . ಪೊಲೀಸ್ ಇನ್ಸ್ ಪೆಕ್ಟರ್ ರವರು ನನಗೂ ಸಹ ಸಹಿ ಮಾಡಲು ಹೇಳಿದರು , ನಾನು ಸಹಿ ಮಾಡಿ ನನ್ನ ಕೆಲಸಕ್ಕೆ ಹಿಂದಿರುಗಿರುತ್ತೇನೆ . ಚಾಸಾ-1 ರವರ ಪರವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ಸಹಿ/-

ವ್ಯ ನ್ಯಾಮತ್ತು ಪ್ರ.ದ.ನ್ಯಾದಂ.

ಮೂಡಬಿದಿರೆ